ಅದು ಆಪ್ಷನಲ್! ಚಹರೆ ಮುಖ್ಯವೆಂದರೆ ವಿವರಕ್ಕೆ ಇಳಿಯೋಣ. ಬೇಡವೆಂದರೆ ಮುಂದೆ ಸಾಗೋಣ. ಎಲ್ಲಕ್ಕಿಂತ ಮೊದಲು, ತುರ್ತಾಗಿ ಅವನಿಗೊಬ್ಬ ದಿಥೀರ್ ಅಪ್ಪ ಮತ್ತು ಅಮ್ಮರನ್ನು ಹುಟ್ಟಿಸಿಬಿಡೋಣ. ಚೆನ್ನೈಯೆಂದ ಮೇಲೆ ತಮಿಳು ಹುಡುಗ, ಸಂಪ್ರದಾಯಬದ್ಧ ಕುಟುಂಬವೆಂಬ ಚಿತ್ರಣವಿದ್ದರೇ ಫಾರ್ಮುಲಾ ಸರಿಯಾಗುವುದಾದರೆ, ಅಪ್ಪ ಕುಂಭಕೋಣಂನವರು, ಅಮ್ಮ ತಿರುಚ್ಚಿ ಕಡೆಯವರು, ಸದ್ಯಕ್ಕೆ ಚೆನ್ನೈವಾಸಿಯೆಂದರೆ ಸರಿ.

ಒಬ್ಬನೇ ಮಗನೋ ಅಥವಾ ಒಬ್ಬ ಮಗ ಮತ್ತು ಒಬ್ಬ ಮಗಳೋ ನಿಮಗೇ ಬಿಟ್ಟಿದ್ದು. ಆದರೆ, ಮಗಳು ನಗಣ್ಯವಾದ್ದರಿಂದ ಒಬ್ಬನೇ ಮಗನ ವಧುವಿನ ಅನ್ವೇಷಣೆಯಲ್ಲಿದ್ದಾರೆ ಎಂದರೆ ಸುಸೂತ್ರ. ಅಮೆರಿಕಾದಲ್ಲಿರುವ ಯಾವುದಾದರೂ ಹುಡುಗಿ ಸಿಕ್ಕಿಬಿಟ್ಟರೆ, ಕೆಲಸ ಸಲೀಸೆಂಬ ಲೆಕ್ಕಾಚಾರದ ವ್ಯವಹಾರವನ್ನು ಅವರೂ ಕಲಿತಿರುವುದರಿಂದ ಅಮೆರಿಕಾಕ್ಕೆ ಹಾರಿ ಹೋದ ಹುಡುಗಿಯರ ದೊಡ್ಡ ಪಟ್ಟಿಯನ್ನೇ ತಮ್ಮ ಮುಂದೆ ತೆರೆದಿಟ್ಟುಕೊಂಡಿದ್ದಾರೆ ಎಂದುಕೊಳ್ಳೋಣ.

ಈಗ ಆ ಪಾತ್ರವನ್ನು ಆರಾಮವಾಗಿ ಸಮುದ್ರ ನೋಡಲು ಬಿಡೋಣ!...

ಮುಸ್ಸಂಜೆ. ಏಕೆಂದರೆ ಪ್ರೇಮಕತೆಗೆ ಸ್ವಲ್ಪ ರೊಮ್ಯಾಂಟಿಕ್ ಮೂಡ್ ಬೇಕಲ್ಲಾ? ಸಮುದ್ರದಲೆಗೆ ಕಣ್ಣು ನೆಟ್ಟು, ಸಮುದ್ರದ ಮತ್ತೊಂದು ಪಾರ್ಶ್ವದಲ್ಲಿ ಉಪ್ಪು ನೀರಿನಲ್ಲಿ ಕಾಲು ಮುಳುಗಿಸಿಕೊಂಡು ಚಿಂತಾಕ್ರಾಂತಳಾಗಿ ಎತ್ತಲೋ ನೋಡುತ್ತಾ ಅಲ್ಲೊಬ್ಬ ಹುಡುಗಿ ಕುಳಿತಿದ್ದಾಳಲ್ಲಾ, ನೋಡಿ. ಆ ಹುಡುಗಿಯನ್ನು ನಾಯಕಿ ಅನ್ನುವುದಾದರೆ ನಾಯಕಿ.

ಅಣ್ಣಾ ಯೂನಿವರ್ಸಿಟಿಯಲ್ಲಿ ಭೌತಶಾಸ್ತ್ರ ಬೋಧಿಸಿ, ಇದೀಗ ರಿಟೈರಾಗಿರುವ ಪ್ರೊಫೆಸರೊಬ್ಬರ ಮಗಳು. ಯಾಕೆ ಎಂದು ಕೇಳುತ್ತೀರಾ? ಹುಡುಗಿಯರ ಅಪ್ಪಂದಿರು ಪ್ರೊಫೆಸರಾಗಿದ್ದರೆ ಕೆಲಸ ಸುಲಭ. ಫಿಸಿಕ್ಸ್ ಮತ್ತು ಮೆಟಾಫಿಸಿಕ್ಸ್‌ಗೆ ಚೂರು ತಾಳೆ ಹಾಕುವುದಕ್ಕಷ್ಟೇ. ಮಕ್ಕಳು ಸುಸಂಸ್ಕೃತರಾಗಿರಬೇಕಲ್ಲಾ? ಯೂನಿವರ್ಸಿಟಿಯಲ್ಲಿರುವವರ ಮಕ್ಕಳಿಗೆ ಸೀಟು ಆರಾಮವಾಗಿ ಸಿಗುವುದರಿಂದ, ಇವೆಲ್ಲಾ ಅನುಕೂಲಕ್ಕಷ್ಟೇ. ಮೂರು ಹೆಣ್ಣು ಮಕ್ಕಳು. ಮೂರ್‍ಯಾಕೆ ಅನ್ನುತ್ತೀರಾ? ಸ್ವಲ್ಪ ಬಿಲ್ಡ್‌ಅಪ್‌ಗೆ ಇರಲಿ. ಮೊದಲಿಬ್ಬರ ಮದುವೆ ಹೇಗೋ ಮುಗಿಸಿ, ಮೂರನೇಯವಳಾದ ಆ ಹುಡುಗಿಗೆ ವರನ ತಲಾಶಿನಲ್ಲಿದ್ದಾರೆ. ಮೊದಲೇ ಹೇಳಿದಂತೆ ಅಣ್ಣಾ ಯೂನಿವರ್ಸಿಟಿಯಲ್ಲಿ ಎಂಜಿನಿಯರಿಂಗ್ ಮುಗಿಸಿದ ಪ್ರೊಫೆಸರ್ ಮಗಳು ಸಹಜವಾಗಿಯೇ ಎಂ. ಎಸ್‌ಗೆಂದು ಅಮೆರಿಕಾಗೆ ಹೋಗಿದ್ದಾಳೆ. ಆದರೆ, ಅಮೆರಿಕಾಗೆ ಹೋದ ಮೇಲೆ ಅವಳೀಗ ಅವರ ಕೈಗೆ ಸಿಗುತ್ತಿಲ್ಲ. ಏನು ಹಾಗೆಂದರೆ ಎಂದು ಕೇಳಬೇಡಿ. ಒಂಚೂರು ಫೀಲ್ ಬರೋದಕ್ಕೆ, 'ಅವಳ ಕಲ್ಯಾಣವೊಂದು ಸುಸೂತ್ರವಾಗಿ ನಡೆದುಬಿಟ್ಟರೇ...' ಎಂದು ಅವಳಪ್ಪ, ಅಮ್ಮ ಇದ್ದಬದ್ದ ಕಳವಡೆಗೆಲ್ಲಾ 'ಆಂಡವಾ... ಮುರುಗಾ...' ಎಂದು ಅಡ್ಡ ಬೀಳುತ್ತಿದ್ದಾರೆಂದು ಪ್ರತೀತಿ.

ಅಮೆರಿಕಾಗೆ ಹೋದ ಹುಡುಗಿ ಏನು ಮಾಡುತ್ತಿದ್ದಾಳೆ ಅನ್ನುವ ಕುತೂಹಲವೇ? ಸಹಜವೇ. ಆದರೆ, ಸದ್ಯಕ್ಕೆ ಯಾರಿಗೂ ಗೊತ್ತಿಲ್ಲ. ಓದುವುದಕ್ಕೇನೋ ಸರಿ, ಆದರೆ, ವಯೋ ಸಹಜ ಕೆಲ ಕುತೂಹಲಗಳಿರುತ್ತವಲ್ಲಾ? ಅವುಗಳ ವಿವರಣೆ ಕೊಡದಿದ್ದರೆ, ಕತೆ ಅಪೂರ್ಣವೆಂದು ಯಾರಾದರೂ ಹೇಳಬಹುದೆನ್ನುವ ಅಂಜಿಕೆಯೇ? ಹಾಗಾದರೆ ಮನೋಯಿಚ್ಛೆ ಪುಟಗಳನ್ನು ತುಂಬಿಸೋಣ. ಅರ್ಥವಾಗಲಿಲ್ಲವೇ? ಒಂದಷ್ಟು ಬುರುಡೆ ಬಿಡೋಣ.

ಸುಳ್ಳು ನಂಬರ್ ಒಂದು: ಭಾರತದಿಂದ, ಅದರಲ್ಲೂ ಸಂಪ್ರದಾಯದ ಬಿಗಿ ಮುಷ್ಟಿಯಲ್ಲಿ ಸುಭದ್ರವಾಗುಳಿದ ದಕ್ಷಿಣದ ತಮಿಳುನಾಡಿನಂತಹ ಪ್ರದೇಶದಿಂದ ಹೋಗಿರುವ ...ಳಿಗೆ ಆಕಾಶಕ್ಕೆ ಮೂರೇ ಗೇಣು ಅನ್ನಿಸುತ್ತಿದೆ. ಅದುವರೆಗೂ ದಕ್ಷಿಣ ಭಾರತದ ಶಾಸ್ತ್ರೀಯ ಸಂಗೀತ ಮಾತ್ರ ಕೇಳಿದ್ದ